
ವಿಳಾಸ ಇರಲಿಲ್ಲ. ಬರೆದವರು ನಳಿನಿ ದೇಶಪಾಂಡೆ ಎಂದು ಹೆಸರು ಹಾಕಿದ್ದರು. 'ಇದನ್ನು ಯಾಕೆ ಬದಿಗೆ ಇಟ್ಟದ್ದೀ?' ಕೇಳಿದ. ನಮ್ಮ ಕಡೆಗೆ 'ನಲಿನಿ ದೇಶಪಾಂಡೆ' ಎನ್ನುತ್ತಾರೆ, ಇರುತ್ತಾರೆ, ಹಾಗೆ ಬರೆಯುತ್ತಾರೆ; 'ನಳಿನಿ' ಯಾರೂ ಅನ್ನುವುದಿಲ್ಲ, ಬರೆಯುವುದಿಲ್ಲ; ಆದರೆ ಇಲ್ಲಿ 'ನಳಿನಿ' ಎಂದಿದೆ; ಇದು ನಮ್ಮ ಕಡೆಯವರ ಹೆಸರಲ್ಲ, ಅಕ್ಷರಗಳೂ ಅಲ್ಲ; ಮತ್ತು ಸ್ಕೂಟರ್ ಗಾಡಿ 'ಲ್ಯಾಂಬ್ರೆಟಾ' ಇರುತ್ತದೆ, ಆದರೆ ಇಲ್ಲಿ ಅದನ್ನೂ ಸರಿಯಾಗಿ ಬರೆದಿಲ್ಲ, ಆದರೆ ಕವಿತೆ ಮೋಜಿನದು, ಹೊಸ ಥರದ್ದು; ಮುಖ್ಯವಾಗಿ ಕಳಿಸಿದವರ ವಿಳಾಸ ಇಲ್ಲ' ಎಂದೆ. 'ನಳಿನಿ ದೇಶಪಾಂಡೆ' ಎಂಬವರು ಬರೆದ ಆ ಕವಿತೆ ನಾಡಿಗನಿಗೂ ಖುಷಿ ನೀಡಿತು.



ಅದರ ಕೈಬರಹ ಮತ್ತೊಮ್ಮೆ ನೋಡಿದ; ಮುಗುಳುನಗುತ್ತ, 'ಇದು ಪೂರ್ಣಚಂದ್ರ ತೇಜಸ್ವಿಯ ಕೈಬರಹ' ಅಂದ. ಎಲಾ ಇವನ! ಇಷ್ಟು ಕಟ್ಟುನಿಟ್ಟಾಗಿ ಹೇಗೆ ಹೇಳುತ್ತಾನೆ, ಎಂದು ಆಶ್ಚರ್ಯವಾದರೂ ನಂಬಿಕೆ ಆಗಲಿಲ್ಲ. ಮೈಸೂರಿನಲ್ಲಿ ಎಂ.ಎ. (1957) ಮಾಡಿಕೊಂಡಿದ್ದ ನಾಡಿಗನಿಗೆ ಅಲ್ಲಿದ್ದ ಅವನ ಎಲ್ಲ ಗೆಳೆಯರ ಕೈಬರಹ ಗೊತ್ತಿದ್ದುವು. "ನನಗೆ ಚೆನ್ನಾಗಿ ಗೊತ್ತು, ಇದು ಪೂಚಂತೇ ಬರೆದದ್ದು. ಮೈಸೂರು ಕಡೆಯವರು ನಲಿನಿ ಬದಲು ನಳಿನಿ ಎಂದೇ ಆ-ಕಾರ ಹೇಳುತ್ತಾರೆ, ಬರೆಯುತ್ತಾರೆ; 'ಲ್ಯಾಂಬರ್ಟಾ', 'ಮಾಡ್ರನ್' ಮುಂತಾದುವು ಸರಿಯಾಗಿ ಉಚ್ಚರಿಸದೆ, ಅವರು ಬಳಸುವ ಪದ; ಈಗ ಒಂದು ಕೆಲಸ ಮಾಡು. ನೀನು ಅವನ ವಿಳಾಸಕ್ಕೆ ಪತ್ರ ಬರೆದು, 'ಈ ಕವಿತೆ ಪ್ರಕಟಿಸುತ್ತೇವೆ, ವಿಳಾಸ ಬೇಕು' ಎಂದು ಕೇಳು" ಅಂದ. 'ಪೂಚಂತೇ ಬೇಕೆಂತಲೇ ನಿಮ್ಮ ಭಾಗದವರೇ ಒಬ್ಬ ಹುಡುಗಿ ಬರೆದ ಹಾಗೆ ಮೋಜು ಮಾಡಿ, ಹೆಸರು ನೋಡಿದೊಡನೆ ನೀವು ಖಂಡಿತ ಪ್ರಕಟಿಸುತ್ತೀರಿ ಎಂದು ಕಳಿಸಿದಂತಿದೆ. ಆದರೆ, ನೀವೂ ಘಟಿಂಗರು...' ಎನ್ನುತ್ತ ನಗತೊಡಗಿದ.

ಆ ಕ್ಷಣವೇ ನಾಡಿಗನ ತುಂಟತನ, ಕಿಲಾಡಿತನ ಮತ್ತು ಘಟಿಂಗತನ ಸಂ-ಯೋಗಗೊಂಡು 'ಲೀಲಾ ರಾವ್' ಎಂಬ ಕವಯಿತ್ರಿ ಉದಿಸಿದಳು. ಒಂದು ಹೊಸ ಪ್ರಯೋಗ ಹಾಗೂ ಪ್ರತಿಭಾ ಪ್ರದರ್ಶನಕ್ಕೆ ಉದಾಹರಣೆ ಎಂಬಂತೆ ನನ್ನ ಕಣ್ಣೆದುರೇ ನಾಡಿಗ 'ಲೀಲಾ ರಾವ್' ಹೆಸರಿನಲ್ಲಿ ಪುಟ್ಟಪುಟ್ಟ, ಮೋಜಿನ, ಗೆಲುವಿನ, ಚೇತೋಹಾರಿ ಪದ್ಯಗಳನ್ನು ಬರೆದು ತೋರಿಸಿದ. 'ಆತ್ಮವಿಶ್ವಾಸ', 'ನಾನು', 'ಥೂ ಹೋಗೇ, ಪೋಲಿ ಕಣೆ ನೀನು', 'ಅವನು' ಮುಂತಾದವು ಆ ಕ್ಷಣ ಬರೆದು ತೋರಿಸಿದ ಕವಿತೆಗಳು. ಮುಂದೆ ಸ್ವಲ್ಪ ಕಾಲದ ನಂತರ (1978) ಪ್ರಕಟವಾದ ಅವನ ಮೂರನೇ ಕವನಸಂಗ್ರಹ 'ಉದ್ಘಾಟನೆ'ಯ ಎರಡನೇ ಭಾಗದಲ್ಲಿ 23 ಲೀಲಾ ರಾವ್ ಪದ್ಯಗಳು ಅಧಿಕೃತವಾಗಿ ಪ್ರಕಟಗೊಂಡವು. ಆ ಸಂಕಲನಕ್ಕೆ ನನ್ನಿಂದಲೇ ಮುನ್ನುಡಿ ಬರೆಸಿಕೊಂಡ. ನಾನು ಲೀಲಾ ರಾವ್ ಹುಟ್ಟಿನ ಹಿನ್ನೆಲೆ ವಿವರಿಸುತ್ತ, ನಾಡಿಗನ ನವ್ಯ ಗೀತಪದ್ಯಗಳನ್ನು ಮೆಚ್ಚಿ ಬರೆದಿದ್ದೆ.

ನಾಡಿಗ ಸೂಚಿಸಿದಂತೆ ನಾನು ಪೂಚಂತೇ ವಿಳಾಸಕ್ಕೆ ಪತ್ರ ಬರೆದು, 'ಕವಿತೆ ಪ್ರಕಟಿಸುತ್ತೇವೆ, ನಮ್ಮ ಪದ್ಧತಿಯಂತೆ ಬರೆದವರ ವಿಳಾಸ ಪ್ರಕಟಿಸಬೇಕಾಗುತ್ತದೆ, ತಿಳಿಸಿರಿ' ಎಂದೆ. ಪೂಚಂತೇ ಉತ್ತರಿಸಿ, ನನ್ನ 'ಪತ್ರ ತಲುಪಿತು' ಎಂದು ಬರೆದರು, ಅದು 'ನಳಿನಿ' ಕವಿತೆಯಲ್ಲಿದ್ದ ಕೈಬರಹವೇ; ಕವಿತೆ ಬರೆದವರ ವಿಳಾಸವನ್ನು ನಾನು 'ಊಹಿಸಿ' ಪತ್ರಿಸಿದ್ದುದನ್ನು, ಮೌನವಾಗಿ 'ಒಪ್ಪಿದ್ದರು', ಆದರೆ ವಿಳಾಸ ಕೊಡಲಿಲ್ಲ.

* * *